# ಭಾಷಣ ಪುರಾಣ



**ಜಿ.ಎನ್. ಧನಂಜಯ ಮೂರ್ತಿ**

ಕಲೆ: ಗುಜ್ಜಾರ್

ಅಷ್ಟೋ ಇಷ್ಟೋ ಕನ್ನಡ ಗೊತ್ತಿರುವ ಕನ್ನಡ ಮೇಷ್ಟ್ರುಗಳಿಗೆ ನವೆಂಬರ್ ಬಂತೆಂದರೆ ಅದು ಭಾಷಣಗಳ ಸುಗ್ಗಿಯ ಕಾಲ. ಭಾವನಾತ್ಮಕವಾದ ನೆಲೆಯಲ್ಲಿ ಮೈಮೇಲೆ ಬಂದವರಂತೆ ದೊಡ್ಡ ಗಂಟಲು ಮಾಡಿಕೊಂಡು ಕೈಗಳಿಂದ ಗಾಳಿಯನ್ನು ಗುದ್ದುತ್ತ ಮಾತನಾಡಿದರೆ ಆತನಿಗೆ ಟೋನಿ ಬ್ಲೇರ್ ಎಂಬ ಬಿರುದು ಪ್ರಾಪ್ತಿಯಾಗಿ ಬಿಡುತ್ತದೆ. ಭಾಷಣಕಾರರೆಂದುಕೊಂಡು 'ಕನ್ನಡಕ್ಕೆ ಹೋರಾಡುವ ಕಂದರು' ಮಹಾನಗರಗಳಲ್ಲಿ ತುಸು ಹೆಚ್ಚೇ ಸಿಗಬಹುದು. ಯಾವ ಖರ್ಚೂ ಇಲ್ಲದೆ ಮಾಡಬಹುದಾದ ಕನ್ನಡಮ್ಮನ ಕೆಲಸ ಇದುವೆ ಆಗಿದೆ. ಅವಳ ಹೆಸರಿನಲ್ಲಿ ಪುಂಖಾನುಪುಂಖವಾಗಿ ಪುಂಗುವುದು ಲಲಿತವಲ್ಲವೆ? ಬಹಳಷ್ಟು ಜನರು ಭಾಷೆಯ ಬಗ್ಗೆ ಭಾಷಣ ಬಿಗಿಯುವುದನ್ನು ಮತ್ತು ಭಾಷೆಯ ಹೆಸರಿನಲ್ಲಿ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಡುವುದನ್ನು ತಮ್ಮ ಸಂಪಾದನೆಯ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ನಮ್ಮ ಪದವಿ ದಿನಗಳಲ್ಲಿ ಕನ್ನಡದ ಬಗ್ಗೆ ಆವೇಶಭರಿತರಾಗಿ ಮಾತನಾಡುವ ಕನ್ನಡ ಮೇಷ್ಟ್ರುಗಳಿದ್ದರು. ಅವರು ನೀವೆಲ್ಲ ಕನ್ನಡಕ್ಕೆ ಕರವೆತ್ತಿ ಹೋರಾಡಲೇಬೇಕೆಂದು ಕರೆಗೊಡುತ್ತಿದ್ದರು. ನಿಜ ಹೇಳಬೇಕೆಂದರೆ ಈ ಬಗೆಯಾಗಿ ಕನ್ನಡಕ್ಕೆ ಕೈ ಎತ್ತಲು ಕರೆಗೊಟ್ಟ ಮೇಷ್ಟ್ರುಗಳೆ ನಾನು ಸಾಹಿತ್ಯದ ವಿದ್ಯಾರ್ಥಿಯಾಗಲು ಕಾರಣಕರ್ತರು. ಇಂತಹ ಭಾವೋದ್ರೇಕದ ಭಾಷಣದಿಂದ ಪ್ರೇರಿತನಾಗಿ ಹೀಗೆಯೆ ಕನ್ನಡದ ಬಗ್ಗೆ ಭಾಷಣ ಹೊಡೆಯಬೇಕೆಂಬ ಉಮೇದಿಗೆ ಬಿದ್ದು ಕನ್ನಡವನ್ನು ಓದಲು ಶುರುವಿಟ್ಟೆ. ಆರಂಭದಲ್ಲಿ ಈ ಆವೇಶದ ಮಾದರಿಯನ್ನು ಅನುಸರಿಸಿ ನಡೆದದ್ದೂ ಆಯಿತು.

ಅದಕ್ಕಾಗಿ ಹುಯಿಲಗೋಳ ನಾರಾಯಣರಾಯರು, ಕುವೆಂಪು, ಬೇಂದ್ರೆ, ಅ.ನ.ಕೃ., ರಾಜರತ್ನಂರ ಪದ್ಯಗಳನ್ನು ಉರು ಹೊಡೆದು ಹೇಳಿದ್ದೆ ಹೇಳಿದ್ದು. ಬಿ.ಎಂ.ಶ್ರೀಯವರ 'ಕನ್ನಡ ಬಾವುಟ'ವನ್ನೇ ಕೈದೀವಿಗೆ ಮಾಡಿಕೊಂಡು ಮೊದಲ ತಾಯ ಹಾಲ ಕುಡಿಯುತ್ತ ಆ ಸಂಗ್ರಹದಲ್ಲಿನ ಪ್ರಸಿದ್ಧ ಪದ್ಯಗಳನ್ನು ಕೇಳುಗರ ಮೇಲೆ ಭಾವುಕ ನೆಲೆಯಲ್ಲಿ ದಾಳಿ ಮಾಡುತ್ತಿದ್ದೆ. ಕುವೆಂಪು ಅವರ 'ಕನ್ನಡಕ್ಕೆ ಹೋರಾಡು ಕನ್ನಡದ ಕಂದ', ರಾಜರತ್ನಂರ 'ನರ್ಕಕ್ ಕಳ್ಸಿ ನಾಲ್ಗೆ ಸೀಳ್ಸಿ' ಪದ್ಯಗಳು ಕನ್ನಡ ರಾಜ್ಯೋತ್ಸವ ಭಾಷಣದ ವೇದವಾಕ್ಕುಗಳು. ಕ್ರಮೇಣ ಕನ್ನಡ ಸಂಸ್ಕೃತಿಯ ಮೇಲೆ ಬಂದಿರುವ ಗಂಭೀರ ಚಿಂತನೆಗಳನ್ನು ಓದುತ್ತಲೇ ಭಾಷೆಯ ಬಗ್ಗೆ ನಮ್ಮ ತಿಳಿವಳಿಕೆಗಳು ಆಮೂಲಾಗ್ರವಾಗಿ ಬದಲಾಗತೊಡಗಿದವು. ಮರಾಠಿಯ ನೆಪದಲ್ಲಿ ಉದ್ಭವಿಸಿದ ಬಾಳಾ ಠಾಕ್ರೆಯಂಥವರು ಕನ್ನಡದಲ್ಲಿಯೂ ಉದ್ಭವಿಸಿದ್ದಾರೆಂಬ ಆತಂಕ ನಮ್ಮೊಳಗೆ ಮೊಳಕೆಯೊಡೆಯಲಾರಂಭಿಸಿತು. ಈಗ